ಕೈಗೊಳ್ಳುತ್ತೀರಾ? ಎಷ್ಟು ದಿವಸ ಇದನ್ನು ಹೀಗೆಯೇ ಎಳೆದಾಡುತ್ತಾ ಹೋಗುತ್ತೀರಿ? ನಿಮ್ಮ ಕಾಲದಲ್ಲಿ ಇದನ್ನು ಮುಗಿಸಬೇಕು.

ಶ್ರೀ ಜೆ.ಹೆಚ್. ಪಟೇಲ್ : ಮೊದಲನೆಯದಾಗಿ 1475 ಸಂಖ್ಯೆ ಸರಿಯಿಲ್ಲ ಎಂದು ಹೇಳಿದರು. ಈಗ ನಾವು ಯಾರಿಗೆ ಪರಿಹಾರಧನವನ್ನು ಕೊಟ್ಟಿದ್ದೇವೆ ಆ ಸಂಖ್ಯೆ 1475 ಎಂದು ನಾನು ಹೇಳಿದ್ದುದು. ಮಾನ್ಯ ಸದಸ್ಯರು ಹೇಳತಕ್ಕದ್ದು ನಿಜ. ಈ ವರ್ಷ ಬಹಳ ಅಚ್ಚು ಮಳೆ ಬಿದ್ದಿರುವುದರಿಂದ ಆ ಬಾರ್ಡರ್ ಏರಿಯಾದಲ್ಲಿ ಸಣ್ಣ ಸಣ್ಣ ಕೊಲ್ಲಿ ಇದ್ದಹಾಗೆ ಇದೆ. ಅಲ್ಲಿ ನೀರು ನುಗ್ಗಿ ಮನೆಗಳು ಬಿದ್ದು, ತೊಂದರೆಯಾಗಿರುವುದು ನಿಜ. ಆದರೆ ಅಂತಹ ಸಂಸಾರಗಳು ಎಷ್ಟು ಎಂಬುದರ ಬಗ್ಗೆ ಮಾಹಿತಿ ನನ್ನಲ್ಲಿ ಇಲ್ಲ. ಆ ಮಾಹಿತಿಯನ್ನು ತಿಳಿದುಕೊಂಡು ಸದಸ್ಯರಿಗೆ ತಿಳಿಸುತ್ತೇನೆ. ಈಗ ಹೊಸದಾಗಿ ಏನು ಮುಳುಗಡೆಗೆ ಬಂದಿದೆ ಅವರ ಲೆಕ್ಕ ಇಲ್ಲ. ಮುಳುಗಡೆಯಾಗಿರುತ್ತದೆ, ಅವರಿಗೆ ಪರಿಹಾರ ಕೊಟ್ಟಿಲ್ಲ. ಅವರ ಹೆಸರು ಇಲ್ಲ. ಅಂತಹವುಗಳನ್ನು ಐಡೆಂಟಿಫೈ ಮಾಡುವ ಬಗ್ಗೆ ಹೈ ಪವರ್ ಕಮೀಟಿಯಲ್ಲಿ ವಿಚಾರ ಮಾಡಲಾಗುವುದು. ಆದರೆ ಅವರಿಗೆ ಏನಾದರೂ ಪರಿಹಾರ ಕೊಡಬೇಕಾದರೆ 83-84ರ ನೋಟಿಫಿಕೇಷನ್ ದರದ ಮೇಲೆ ಕೊಡುವುದಿಲ್ಲ. ಈಗ ಹತ್ತು-ಇಪ್ಪತ್ತು ಸಾವಿರ ರೂಪಾಯಿಗಳಿಗೆ ಒಂದು ಎಕರೆ ಭಾಗಾಯಿತು ಸಿಗುವುದಿಲ್ಲ, ಖುಷ್ಕಿ ಜಮೀನು ಸಿಗುವುದಿಲ್ಲ. ಈಗಿನ ಮಾರ್ಕೆಟ್ ರೇಟ್ ಏನು ಇದೆ ಅದನ್ನು ಕೊಡಲು ನಾವು ತೀರ್ಮಾನ ತೆಗೆದುಕೊಳ್ಳುತ್ತೇವೆ. ಇನ್ನು ರಸ್ತೆಗಳ ಬಗ್ಗೆ, ಈಗಾಗಲೇ 20-25ಕಿ.ಮೀ. ಬಾರ್ಡರ್ ರೋಡ್ ಮಾಡಿದ್ದೇವೆ. ಉಳಿದ ಕಡೆ ಇನ್ನು ಸ್ವಲ್ಪ ಬಾಕಿ ಇದೆ. ಮಾನ್ಯ ಸದಸ್ಯರಿಗೆ ಗೊತ್ತಿದೆ ಕೆಲವು ಕಡೆ ರಸ್ತೆ ಮಾಡಲು ಅಡ್ಡಿ ಮಾಡಿದರು. ಆ ಅಡ್ಡಿ ಈಗ ಇಲ್ಲ. ಆದರೆ ಅಲ್ಲಿ ಇರತಕ್ಕ ಜನರಿಗೆ ನಾಗರೀಕ ಸೌಲಭ್ಯವನ್ನು ಒದಗಿಸಲು ಏನು ರಸ್ತೆ ಬೇಕು ಅದನ್ನು ನಾನು ಪಿ.ಡಬ್ಲ್ಯೂ.ಡಿ. ಅಥವಾ ಇರಿಗೇಷನ್ ಡಿಪಾರ್ಟ್‌ಮೆಂಟ್‌ಗೆ ಹೇಳಿ ಆ ರಸ್ತೆಗಳನ್ನು ಕನೆಕ್ಟ್ ಮಾಡಿಸುವ ಕೆಲಸ ಮಾಡುತ್ತೇನೆ.

ಹಾಸನ ಜಿಲ್ಲೆಯಲ್ಲಿ ಡಿ.ಪಿ.ಎ. ಯೋಜನೆಗಳು

995-ಶ್ರೀ ಬಿ. ಶಿವರಾಮ್ (ಗಂಡಸಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆಯಲ್ಲಿ ಯಾವ ಯಾವ ತಾಲ್ಲೂಕಿಗೆ 1) ನೆಮ್ಮದಿ 2) ಭರವಸೆ ಮತ್ತು ಡಿಪಿಎಪಿ ಯೋಜನೆಗಳು ಮಂಜೂರಾಗಿದೆ ಮತ್ತು ಯಾವ ಆಧಾರದ ನಿಬಂಧನೆ ಮೇಲೆ ಮಂಜೂರಾಗಿದೆ;

ಆ) ಮಂಜೂರಾಗಿರುವ ಯೋಜನೆಗಳ ಕ್ರಿಯಾಶೀಲ ಯೋಜನೆಗಳು (ನೆಮ್ಮದಿ, ಭರವಸೆ ಮತ್ತು ಡಿಪಿಎಪಿ) ಮೊತ್ತವೆಷ್ಟು?

ಇ) ಯೋಜನೆಗಳಿಗೆ ಮಂಜೂರಾಗಿರುವ ಹಣವೆಷ್ಟು; (ನೆಮ್ಮದಿ, ಭರವಸೆ ಮತ್ತು ಡಿಪಿಎಪಿ)

ಈ) ಯೋಜನೆಗಳಿಗೆ ಸರ್ಕಾರ ಬಿಡುಗಡೆ ಮಾಡಿರುವ ಹಣವೆಷ್ಟು; (ನೆಮ್ಮದಿ, ಭರವಸೆ ಮತ್ತು ಡಿಪಿಎಪಿ)

ಉ) ಯೋಜನೆಗಳಲ್ಲಿ ಖರ್ಚಾಗಿರುವ ಹಣವೆಷ್ಟು; (ನೆಮ್ಮದಿ, ಭರವಸೆ ಮತ್ತು ಡಿಪಿಎಪಿ)

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) 1994-95ನೇ ಸಾಲಿನಲ್ಲಿ ನೆಮ್ಮದಿ ಯೋಜನೆಯನ್ನು ಹಾಸನ ಜಿಲ್ಲೆಯ 8 ಬ್ಲಾಕುಗಳಲ್ಲಿ ಅಂದರೆ 1) ಹಾಸನ 2) ಆಲೂರು 3) ಹೊಳೆನರಸೀಪುರ 4) ಸಕಲೇಶಪುರ

5) ಬೇಲೂರು 6) ಅರಸೀಕೆರೆ 7) ಅರಕಲಗೂಡು ಮತ್ತು 8) ಚನ್ನರಾಯಪಟ್ಟಣ ಬ್ಲಾಕುಗಳಲ್ಲಿ ತೆಗೆದುಕೊಳ್ಳಲಾಗಿದೆ.

ಅನಂತರ, ಕೇಂದ್ರ ಸರ್ಕಾರದವರು ಡಿಪಿಎಪಿ ಹಾಗೂ ಉದ್ಯೋಗ ಭರವಸೆ ಯೋಜನೆಯನ್ನು ಹಾಸನ ಜಿಲ್ಲೆಯ 4 ಬ್ಲಾಕುಗಳಲ್ಲಿ ಅಂದರೆ 1) ಹಾಸನ 2) ಬೇಲೂರು 3) ಅರಸೀಕೆರೆ 4) ಚನ್ನರಾಯಪಟ್ಟಣ ತಾಲ್ಲೂಕುಗಳಲ್ಲಿ ವಿಸ್ತರಿಸಿರುತ್ತಾರೆ. ನೆಮ್ಮದಿ ಮತ್ತು ಉದ್ಯೋಗ ಭರವಸೆ ಯೋಜನೆಗಳು ಒಂದೇ ರೀತಿಯಾಗಿರುವುದರಿಂದ ನೆಮ್ಮದಿ ಯೋಜನೆಯನ್ನು ಮೇಲೆ ಹೇಳಲಾದ 4 ಬ್ಲಾಕುಗಳಲ್ಲಿ ಫೆಬ್ರವರಿ 95 ರಿಂದ ಕೈಬಿಡಲಾಗಿದೆ.

ಕೇಂದ್ರ ಸರ್ಕಾರವು ಹೊಸದಾಗಿ ಡಿಪಿಎಪಿ ಬ್ಲಾಕ್‌ಗಳನ್ನು ಆಳವಡಿಸುವಲ್ಲಿ ಒಟ್ಟಾರೆ ಸಾಗವಳಿ ಪ್ರದೇಶಕ್ಕೆ ಶೇಕಡಾವಾರು ನೀರಾವರಿ ಪ್ರದೇಶಕ್ಕೆ ಹೋಲಿಸಿ ಡಿಪಿಎಪಿ ತಾಲ್ಲೂಕುಗಳನ್ನು ಕೇಂದ್ರ ಸರ್ಕಾರವು ನಿಗಧಿಪಡಿಸುತ್ತದೆ.

ಆ) 1994-95ನೇ ಸಾಲಿಗೆ ನೆಮ್ಮದಿ ಯೋಜನೆಯ ಕ್ರಿಯಾ ಯೋಜನೆಯನ್ನು ರೂ. 444.40 ಲಕ್ಷಗಳಿಗೆ ತಯಾರಿಸಲಾಗಿದೆ. ಉದ್ಯೋಗ ಭರವಸೆ ಯೋಜನೆಯನ್ನು 1995ನೇ ಜನವರಿ ಮಾಹೆಯಿಂದ ಜಾರಿಗೆ ಬಂದಿದ್ದು, ಈ ಯೋಜನೆಯಡಿಯಲ್ಲಿ ರೂ. 200.00 ಲಕ್ಷಗಳಿಗೆ ಕ್ರಿಯಾ ಯೋಜನೆಯನ್ನು ತಯಾರಿಸಲಾಗಿದೆ. ಡಿಪಿಎಪಿ ಯೋಜನೆಯು 1995-96ನೇ ಸಾಲಿನಿಂದ ಈ ಮೇಲೆ ಹೇಳಿದ 4 ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸಲಿರುವುದರಿಂದ ಕ್ರಿಯಾ ಯೋಜನೆಯ ತಯಾರಿಕೆಯನ್ನು ಪ್ರಾರಂಭಿಸಲಾಗಿದೆ.

ಇ) ತಾಲ್ಲೂಕು ಒಂದಕ್ಕೆ ರೂ. 55.55 ಲಕ್ಷಗಳಂತೆ ನೆಮ್ಮದಿ ಯೋಜನೆಯಲ್ಲಿ ನಿಗದಿಪಡಿಸಿದ್ದು, 1994-95ನೇ ಸಾಲಿಗೆ 444.40 ಲಕ್ಷ ರೂ.ಗಳ ತಾತ್ಕಾಲಿಕ ಹಂಚಿಕೆಯಾಗಿರುತ್ತದೆ. ಉದ್ಯೋಗ ಭರವಸೆ ಯೋಜನೆಯು ಮೂಲತಃ ಬೇಡಿಕೆ ಆಧರಿಸಿದ ಕಾರ್ಯಕ್ರಮವಾಗಿರುವುದರಿಂದ ಯಾವುದೇ ನಿರ್ದಿಷ್ಟ ಹಣದ ಹಂಚಿಕೆಯನ್ನು ಈ ಯೋಜನೆಯಡಿ ಭಾರತ ಸರ್ಕಾರವು ಮಾಡಿರುವುದಿಲ್ಲ. ಡಿಪಿಎಪಿ ಯೋಜನೆಯನ್ನು 1995-96ನೇ ಸಾಲಿನಲ್ಲಿ ಅನುಷ್ಠಾನಗೊಳಿಸುವುದರಿಂದ, ಯಾವುದೇ ಹಣವನ್ನು ಈವರೆಗೆ ಮಂಜೂರು ಮಾಡಿರುವುದಿಲ್ಲ.

ಈ) ನೆಮ್ಮದಿ ಯೋಜನೆಯಲ್ಲಿ ಇಂದಿನವರೆಗೆ ಒಟ್ಟು ರೂ. 333.20 ಲಕ್ಷ ಬಿಡುಗಡೆ ಮಾಡಲಾಗಿದೆ. ಭಾರತ ಸರ್ಕಾರವು ಉದ್ಯೋಗ ಭರವಸೆ ಯೋಜನೆಯಡಿಯಲ್ಲಿ ಪ್ರತಿ ಬ್ಲಾಕಿಗೆ ರೂ. 30.00 ಲಕ್ಷದಂತೆ ರೂ. 120.00 ಲಕ್ಷಗಳನ್ನು ನೇರವಾಗಿ ಹಾಸನ ಜಿಲ್ಲಾ ಪಂಚಾಯಾತ್‌ಗೆ ಬಿಡುಗಡೆ ಮಾಡಿರುತ್ತೆ. ಡಿಪಿಎಪಿ ಯೋಜನೆಯನ್ನು 1995-96ರಲ್ಲಿ ಅನುಷ್ಠಾನಗೊಳಿಸುವುದರಿಂದ, ಈ ಯೋಜನೆಯಡಿಯಲ್ಲಿ ಯಾವುದೇ ಹಣವನ್ನು ಬಿಡುಗಡೆ ಮಾಡಿರುವುದಿಲ್ಲ.

ಉ) ವರದಿಯ ಪ್ರಕಾರ ನೆಮ್ಮದಿ ಯೋಜನೆಯಲ್ಲಿ ರೂ. 105.256 ಲಕ್ಷಗಳು ಹಾಗೂ ಉದ್ಯೋಗ ಭರವಸೆ ಯೋಜನೆಯಲ್ಲಿ ರೂ. 30.00 ಲಕ್ಷಗಳನ್ನು ಖರ್ಚು ಮಾಡಲಾಗಿದೆ.

ಶ್ರೀ ಬಿ. ಶಿವರಾಮು : ಇಲ್ಲಿ ಶೇಕಡಾವಾರು ನೀರಾವರಿ ಪ್ರದೇಶ ಎಷ್ಟು ಎಂಬುದನ್ನು ತಿಳಿಸಬೇಕು. ಕ್ರಿಯಾಶೀಲ ಯೋಜನೆಯ ಬಗ್ಗೆ 94-95ಕ್ಕೆ ಮಂಜೂರಾಗಿರತಕ್ಕದ್ದು 444.4 ಲಕ್ಷ ರೂಪಾಯಿ; ಬಿಡುಗಡೆಯಾಗಿರುವುದು 333.2 ಲಕ್ಷ, ಪ್ರಗತಿಕಾರ್ಯದಲ್ಲಿರತಕ್ಕದ್ದು 105.25 ಲಕ್ಷ, ಈ ಪ್ರಗತಿ ಕುಂಠಿತವಾಗುವುದಕ್ಕೆ ಕಾರಣವೇನು? ಇನ್ನು ಉದ್ಯೋಗ ಭರವಸೆ ಯೋಜನೆಯಲ್ಲಿ 120 ಲಕ್ಷ ರೂಪಾಯಿ ಮಂಜೂರು ಆಗಿದೆ. ಪ್ರಗತಿಯಲ್ಲಿರುವುದು 30 ಲಕ್ಷ ರೂಪಾಯಿ ಅದಕ್ಕೆ ಕಾರಣವೇನು? ಉಳಿದಿರತಕ್ಕ ಹಣ 111.20 ಲಕ್ಷ

ಇದನ್ನು ಯಾವಾಗ ಬಿಡುಗಡೆ ಮಾಡುತ್ತೀರಿ? ನೆಮ್ಮದಿ ಯೋಜನೆಯನ್ನು 95-96ರಲ್ಲಿ ಮುಗಿಸುತ್ತೀರಾ?

ಶ್ರೀ ಎಂ.ಪಿ. ಪ್ರಕಾಶ್: 1994-95ರಲ್ಲಿ ಕರ್ನಾಟಕ ಸರ್ಕಾರ "ನೆಮ್ಮದಿ" ಎಂಬ ಹೊಸ ಯೋಜನೆಯನ್ನು ಪ್ರಾರಂಭಿಸಿತು. ಅದರ ಪ್ರಕಾರ 8 ಬ್ಲಾಕ್‌ಗಳಲ್ಲಿ ಪ್ರಾರಂಭಿಸಿದ ನೆಮ್ಮದಿ ಯೋಜನೆಗಳಿಗೆ ಐವತ್ತೈದು ಲಕ್ಷ ರೂಪಾಯಿಗಳ ಮಂಜೂರಾತಿ ಕೊಟ್ಟಿದ್ದರು. ಅದು ಒಂದು ಉದ್ಯೋಗ ಭರವಸೆಯ ಯೋಜನೆಯ ರೀತಿಯಲ್ಲಿ ಇದ್ದುದರಿಂದ ಕೇಂದ್ರ ಸರ್ಕಾರದವರು ಡಿ.ಪಿ.ಎ.ಪಿ. ಯೋಜನೆಯನ್ನು ಸೇರಿಸುವ ಪ್ರಯತ್ನವಾಗಿ ಸುಮಾರು ಅವರು ಇಪ್ಪತ್ತೈದು ಹೊಸ ಬ್ಲಾಕ್‌ಗಳ ಮಂಜೂರಾತಿ ಮಾಡಿದಂತಹ ಸಂದರ್ಭದಲ್ಲಿ ಈ ನೆಮ್ಮದಿ ಯೋಜನೆಯಲ್ಲಿ ಸಂಪೂರ್ಣವಾಗಿ ರಾಜ್ಯಸರ್ಕಾರದ ಹಣ ಇರುತ್ತದೆ. ನಾವು ಇದರ ಬಗ್ಗೆ ಯೋಚನೆ ಮಾಡಿ ಒಂದು ನಿರ್ಧಾರವನ್ನು ತೆಗೆದುಕೊಂಡಿದ್ದೇವೆ. ನೆಮ್ಮದಿ ಯೋಜನೆ ಅಡಿಯಲ್ಲಿ ಬರತಕ್ಕಂಥ ನಾಲ್ಕು ತಾಲ್ಲೂಕುಗಳನ್ನು ಕೇಂದ್ರ ಸರ್ಕಾರದಿಂದ ಬರತಕ್ಕಂಥ ಹೊಸ ಡಿ.ಪಿ.ಎ.ನಲ್ಲಿ ಸೇರಿಸಿಕೊಳ್ಳಲಾಗಿದೆ. ಇದಕ್ಕೆ 112 ಲಕ್ಷ ರೂಪಾಯಿಯನ್ನು ಬಿಡುಗಡೆ ಮಾಡಬೇಕಾಗಿದೆ. 31.3.1995 ರಂದು ನೆಮ್ಮದಿಗೆ 114 ಲಕ್ಷ ರೂಪಾಯಿಗಳನ್ನು ಹಳೆಯ ಬಾಕಿಯನ್ನು ಬಿಡುಗಡೆ ಮಾಡಿದ್ದೇವೆ. ಇದರ ಬಗ್ಗೆ ಆತಂಕ ವ್ಯಕ್ತಪಡಿಸುವ ಅವಶ್ಯಕತೆ ಇಲ್ಲ.

ಶ್ರೀ ಬಿ. ಶಿವರಾಮು : ಶೇಕಡಾವಾರು ನೀರಾವರಿ ಪ್ರದೇಶ ಎಂದರೆ ಎಷ್ಟು. ಪ್ರಗತಿ ಆಗದೇ ಇರುವುದಕ್ಕೆ ಕಾರಣಗಳು ಏನು? ಕ್ರಿಯಾಶೀಲ ಯೋಜನೆಗೆ 444 ಲಕ್ಷ ರೂಪಾಯಿಗಳು ಮಂಜೂರಾಗಿದ್ದು, ಬಿಡುಗಡೆ ಮಾಡಿರುವುದು 330 ಲಕ್ಷ, ಪ್ರಗತಿಯಲ್ಲಿರತಕ್ಕಂಥದ್ದು 105. ಇನ್ನು 111 ಲಕ್ಷ ರೂಪಾಯಿ ಬಿಡುಗಡೆಯಾಗಬೇಕಾಗಿದೆ. ಈ ಪ್ರಗತಿ ಕುಂಠಿತಗೊಳ್ಳಲು ಕಾರಣವೇನು? ಉದ್ಯೋಗ ಭರವಸೆ ಯೋಜನೆಯಲ್ಲಿ 120 ಲಕ್ಷ ರೂಪಾಯಿ ಬಿಡುಗಡೆಯಾಗಿದೆ. ನೆಮ್ಮದಿ ಯೋಜನೆಯು ರಾಜ್ಯ ಸರ್ಕಾರದ ಯೋಜನೆ. ಆದರೆ ಉದ್ಯೋಗ ಯೋಜನೆ ಕೇಂದ್ರ ಸರ್ಕಾರದ ಯೋಜನೆ.

ಇದರಲ್ಲಿ ಮೂವತ್ತು ಲಕ್ಷ ರೂಪಾಯಿಗಳಷ್ಟು ಮಾತ್ರ ಪ್ರಗತಿಯಲ್ಲಿದೆ. ಇವರೆಡೂ ಕುಂಠಿತಗೊಳ್ಳಲು ಕಾರಣವೇನು? ನೆಮ್ಮದಿ ಯೋಜನೆಯಲ್ಲಿ ಕೇಂದ್ರ ಸರ್ಕಾರದ ಹಣ ಪೂರ್ಣವಾಗಿ ಬಂದಿದೆಯೇ? 95-96ಕ್ಕೆ ಇದನ್ನು ಮುಂದುವರಿಸುತ್ತೀರಾ?

ಶ್ರೀ ಎಂ.ಪಿ. ಪ್ರಕಾಶ್ : ಈ ಪ್ರಶ್ನೆಯಲ್ಲಿ ಪ್ರಗತಿ ಕುಂಠಿತವಾಗಿದ್ದ ವಿಚಾರಗಳ ಬಗ್ಗೆ ಪ್ರಶ್ನೆಯನ್ನು ನೇರವಾಗಿ ಹಾಕಿಲ್ಲ. ಆದರೂ ಕೂಡ ನಾನು ಹೇಳಬೇಕಾಗಿದೆ. ನೆಮ್ಮದಿ ಯೋಜನೆ ಸಂಪೂರ್ಣವಾಗಿ ರಾಜ್ಯ ಸರ್ಕಾರದ ಹಣದ ಮೂಲಕ ನಡೆಯುವಂಥ ಕಾರ್ಯಕ್ರಮ. 81 ಬ್ಲಾಕ್‌ಗಳಲ್ಲಿ ಅದನ್ನು ಸೇರಿದಿದ್ದೇವೆ. ಇದಕ್ಕೆ ಹೆಚ್ಚುವರಿ ಹಣವನ್ನು ಬಿಡುಗಡೆ ಮಾಡತಕ್ಕಂಥವರಲ್ಲಿ ವಿಳಂಬ ಆಗಿರುವುದರಿಂದ ಪ್ರಗತಿ ಕುಂಠಿತವಾಗಿರುವುದು ಒಂದು ಕಾರಣ ಇರಬಹುದು. ಈಗ ಡಿ [illegible] ರ್ಯಕ್ರಮ ಇರುವುದರಿಂದ 111 ಲಕ್ಷ ರೂಪಾಯಿಯನ್ನು 31ನೇ [illegible] ಬಿಡುಗಡೆ ಮಾಡಿದ್ದೇವೆ. ಯಾವ ರೀತಿಯಲ್ಲೂ ವಿಳಂಬ ಆಗಲು ಕಾರಣವಿಲ್ಲ. ರಾಜ್ಯ ಸರ್ಕಾರ ಶೇಕಡಾವಾರು ನೀರಾವರಿ ಪ್ರದೇಶ, ತಾಲ್ಲೂಕು ನೀರಾವರಿ ಪ್ರದೇಶ ಎಷ್ಟು ಇದೆ ಅದನ್ನು ಕಂಡುಹಿಡಿದು ಅವುಗಳನ್ನು ಡಿ.ಪಿ.ಎ.ಪಿ.ನಲ್ಲಿ ಅಳವಡಿಸಿಕೊಂಡು ಬ್ಲಾಕ್‌ಗಳನ್ನಾಗಿ ಮಾಡಿ ಒಂದು ಮಾಪನವನ್ನು ಇಟ್ಟುಕೊಂಡಿದ್ದೇವೆ. ಎಷ್ಟು ಪ್ರಮಾಣದಲ್ಲಿ ನೀರಾವರಿ ಇದೆ ಎಂಬ ಉತ್ತರ ಬಂದಿಲ್ಲ. ಅದನ್ನು ಮಾನ್ಯ ಸದಸ್ಯರಿಗೆ ಕಳುಹಿಸಿಕೊಡುತ್ತೇನೆ.

ಶ್ರೀ ಬಿ. ಶಿವರಾಮು : ಉತ್ತರದಲ್ಲಿ ಅವರೇ ಒದಗಿಸಿದ್ದಾರೆ. ಡಿ.ಪಿ.ಎ.ಪಿ. ಪ್ರೋಗ್ರಾಮ್ ಇಂಪ್ಲಿಮೆಂಟ್ ಮಾಡುತ್ತಿಲ್ಲ. 95-96ರಲ್ಲಿ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ. 94-95ರಲ್ಲಿ ಮಂಜೂರಾತಿ ಆಗಿರುವುದಕ್ಕೆ ಈಗ ಕ್ರಿಯಾಶೀಲ ಯೋಜನೆ

ಮಾಡಿದ್ದಾರೆ. 95-96ರಲ್ಲಿ ತೆಗೆದುಕೊಳ್ಳುತ್ತಾರೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಡಿ.ಪಿ.ಎ.ಪಿ. ಏರಿಯಾ ಎಂದು ಕೇಂದ್ರ ಸರ್ಕಾರ ಏನು ಗುರುತಿಸಿದೆ ಆ ಪ್ರದೇಶಗಳಿಗೆ ಉದ್ಯೋಗ ಭರವಸೆ ಯೋಜನೆಯನ್ನು 94-95ಕ್ಕೆ ಅನುಷ್ಠಾನಗೊಳಿಸುತ್ತೇವೆ ಎಂದು ಹೇಳಿದ್ದೀರಿ. ಉದ್ಯೋಗ ಭರವಸೆ ಯೋಜನೆ ಮಾತ್ರ ಈಗ ಅನುಷ್ಠಾನಕ್ಕೆ ಬರುತ್ತಿದೆ. ಅದು ನಾಲ್ಕು ಬ್ಲಾಕ್‌ಗಳಲ್ಲಿ ಗ್ರಾಮ ಪಂಚಾಯತಿ ಮೂಲಕ. ಈ ಯೋಜನೆಯಲ್ಲಿ 120 ಲಕ್ಷ ರೂಪಾಯಿಗಳು, ಬರೀ ಮೂವತ್ತು ಲಕ್ಷ ರೂಪಾಯಿಗಳಷ್ಟು ಮಾತ್ರ ಖರ್ಚಾಗಲು ಕಾರಣ ಏನು? 94-95ರಲ್ಲಿ ಡಿ.ಪಿ.ಎ.ಪಿ.ನಲ್ಲಿ ಹೊಸದಾಗಿ ಏನು ಸೇರಿಸಿದ್ದೀರಿ ಅವುಗಳನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರ ಎರಡೂ ಸೇರಿ ಅನುಷ್ಠಾನಗೊಳಿಸಬೇಕು. ಇದಕ್ಕೆ ಕೇಂದ್ರ ಸರ್ಕಾರದಿಂದ ಮ್ಯಾಚಿಂಗ್ ಗ್ರ್ಯಾಂಟ್ಸ್ ಬಂದಿದೆಯೇ? ಡಿ.ಪಿ.ಎ.ಪಿ. ಏರಿಯಾ ಎಂಬುದು 94-95ನೇ ಸಾಲಿನಲ್ಲಿ ಬರುತ್ತದೆಯೇ? ಇನ್ನು 111 ಲಕ್ಷ ಬಿಡುಗಡೆ ಆಗಬೇಕಾಗಿದೆ. ಕಾನ್ಸ್ಟಿಟೂಯೆನ್ಸಿ ಕೆಲಸ ಸಫರ್ ಆಗುತ್ತಿರುವ ದೃಷ್ಟಿಯಿಂದ ನಾನು ಈ ಪ್ರಶ್ನೆ ಮೂಲಭೂತವಾಗಿ ಅಲ್ಲಿ ಕೆಲಸ ಆಗುತ್ತಾ ಇಲ್ಲ, ಹಣ ಬಿಡುಗಡೆ ಆಗದೇ ಹೋದರೆ ಬಹಳ ತೊಂದರೆ ಆಗುತ್ತದೆ. ನನ್ನ ಜಿಲ್ಲೆ ಮುಖ್ಯಮಂತ್ರಿಗಳ ಜಿಲ್ಲೆ. ಅಲ್ಲಿ ಅಧಿಕಾರಿಗಳಲ್ಲಿ ಕೊ-ಆರ್ಡಿನೇಷನ್ ಇಲ್ಲ. ಸರಿಯಾದ ಸುತ್ತೋಲೆಯನ್ನು ಕಳುಹಿಸಿರಿ. ಇ.ಎ.ಡಬ್ಲ್ಯೂ ಆಗಬೇಕಾದರೆ ಗ್ರಾಮ ಪಂಚಾಯತಿಗಳಿಗೆ ಸರಿಯಾದ ಸುತ್ತೋಲೆ ತಲುಪಿಲ್ಲ.

11.30 ಎ.ಎಂ

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೇ, ಇದರಲ್ಲಿ ಗೊಂದಲಕ್ಕೆ ಯಾವ ಕಾರಣಗಳೂ ಕೂಡ ಇಲ್ಲ. ಒಟ್ಟಿನಲ್ಲಿ ಈಗ ಇರತಕ್ಕಂಥ 'ನೆಮ್ಮದಿ' ಎನ್ನತಕ್ಕ ಒಂದು ಕಾರ್ಯಕ್ರಮ ರಾಜ್ಯ ಸರ್ಕಾರದ ಕಾರ್ಯಕ್ರಮವಾಗಿದೆ. ಅದು 8 ಬ್ಲಾಕ್‌ಗಳಿಗೆ ಕೊಟ್ಟಿರತಕ್ಕಂಥದ್ದು. ಹಣಕಾಸನ್ನು 55 ಲಕ್ಷ ಪ್ರಕಾರವಾಗಿ ಕೊಡದೇ ಇರತಕ್ಕಂಥದ್ದು ಆಗಿತ್ತು. ಆದರೆ ಮುಂದೆ ಅಲೋಕೇಷನ್ 55 ಲಕ್ಷದಲ್ಲಿ ಕೇವಲ 27 ಲಕ್ಷ ರೂ.ಗಳನ್ನು ಮಾತ್ರ ಹಾಸನ ತಾಲ್ಲೂಕಿನಲ್ಲಿ ಬಿಡುಗಡೆಯಾಯಿತು. ಬೇಲೂರಿನಲ್ಲಿ 55.55 ಲಕ್ಷಕ್ಕೆ 27.75 ಲಕ್ಷ ಬಿಡುಗಡೆ ಆಗಿದ್ದು. ಹಾಗೆ ತಮಗೆ ಸಂಬಂಧಪಟ್ಟಿರತಕ್ಕಂಥ ಅರಕಲಗೂಡು, ಸಕಲೇಶಪುರ, ಚಿನ್ನರಾಯಪಟ್ಟಣ, ಆಲೂರು, ಅರಸೀಕೆರೆ, ಬೇಲೂರು, ಈ ತಾಲ್ಲೂಕುಗಳಿಗೆ ನೆಮ್ಮದಿ ಯೋಜನೆಯಲ್ಲಿ ಕೊಟ್ಟಿರತಕ್ಕಂಥ ಹಣ 55.55 ಲಕ್ಷಗಳಲ್ಲಿ ಕೇವಲ 27 ಲಕ್ಷ ರೂ.ಗಳನ್ನು ಮಾತ್ರ ಪ್ರತಿಯೊಂದು ತಾಲ್ಲೂಕಿಗೂ ಬಿಡುಗಡೆ. ಆಗಿದೆ. ಅಂದರೆ ಹಣದ ಅಭಾವದ ಮೂಲಕವಾಗಿ ನಾವು ಇತ್ತೀಚೆಗೆ ಪ್ರಯತ್ನ ಮಾಡಿದ ನಂತರ ಕೇಂದ್ರ ಸರ್ಕಾರದವರು ನಮ್ಮಲ್ಲಿ ಹಣ ಖರ್ಚಾಗದೇ ಇರತಕ್ಕಂಥದ್ದನ್ನು ಕಂಡಮೇಲೆ ನಮ್ಮ ರಾಜ್ಯ ಸರ್ಕಾರ ಅಸ್ತಿತ್ವಕ್ಕೆ ಬಂದಮೇಲೆ ನಮ್ಮ ಒತ್ತಡಗಳ ಮೂಲಕವಾಗಿ ಮತ್ತೆ 25 ಬ್ಲಾಕ್‌ಗಳನ್ನು ಡಿ.ಪಿ.ಎ.ಪಿ.ಗೆ ಸೇರಿಸುವಂಥ ಒಂದು ಅವಕಾಶವನ್ನು ಕಲ್ಪಿಸಿಕೊಟ್ಟರು. 'ನೆಮ್ಮದಿ' ಯೋಜನೆ ಇರತಕ್ಕಂಥ ಪ್ರದೇಶದಲ್ಲಿ ಡಿ.ಪಿ.ಎ.ಪಿ. ಯೋಜನೆಗಳನ್ನು ನಾವು ತಂದುದ್ದರಿಂದ ಸಮಗ್ರವಾಗಿರತಕ್ಕಂಥ ಹಣಕಾಸಿನ ಜವಾಬ್ದಾರಿಯನ್ನು ಹೊಡಬೇಕಾಗಿರತಕ್ಕಂಥ ರಾಜ್ಯ ಸರ್ಕಾರದ ಹೊರೆ ಕೇವಲ ಶೇಕಡ 50ಕ್ಕೆ ಸೀಮಿತವಾಗಿರಿಸಲ್ಪಟ್ಟಿತು.

ಈ ಮೂಲಕವಾಗಿ ಈಗಾಗಲೇ 27 ಲಕ್ಷ ರೂ.ಗಳನ್ನು ಏನು ನಾವು ಬಿಡುಗಡೆ ಮಾಡಿದ್ದೇವೆ ಈ ಬಗ್ಗೆ ಹಣವನ್ನು ಶೇಕಡ 50ರಷ್ಟು ಇರತಕ್ಕಂಥದ್ದನ್ನು ರಾಜ್ಯ ಸರ್ಕಾರದ ಸಹಾಯ ಎಂದು ಪರಿಗಣಿಸಿ, ಉಳಿದಿರತಕ್ಕಂಥ ಹಣವನ್ನು ತೆಗೆದುಕೊಂಡು ಕೆಲಸವನ್ನು ಮಾಡಬೇಕು ಎನ್ನತಕ್ಕ ರೀತಿಯಲ್ಲಿ ಆದೇಶವನ್ನು ಕೊಟ್ಟಿದ್ದೇವೆ. ಹಣ ಖರ್ಚಾಗದ ಕಾರಣದಿಂದ ನಮ್ಮ ಸರ್ಕಾರ ಬರುವ ಪೂರ್ವದಲ್ಲಿ ಇದು ಹೆಚ್ಚಿನ

ಕೆಲಸವನ್ನು ಮಾಡಿಲ್ಲ. ಇದು ಒಂದು ಸ್ವಲ್ಪಮಟ್ಟಿಗೆ ಹಣ ಖರ್ಚಾಗದೇ ಇರತಕ್ಕಂಥದ್ದಕ್ಕೆ ಕಾರಣವಾಗಿದೆ. ಆದರೆ 31-03-95ನೇ ತಾರೀಖು 111 ಲಕ್ಷ ರೂ.ಗಳನ್ನು ಈಗಾಗಲೇ ಬಿಡುಗಡೆ ಮಾಡಿದ್ದೇವೆ. ಇದು ಏನೂ ಲ್ಯಾಪ್ಸ್ ಆಗುವಂಥ ಹಣವಲ್ಲ. 'ಉದ್ಯೋಗ ದೃಢೀಕರಣ ಯೋಜನೆ' ಭರವಸೆ ಯೋಜನೆ ಕೆಳಗಡೆ, 94-95 ಆದಮೇಲೆ 1995-96ನೇ ಸಾಲಿನಲ್ಲೂ ಕೂಡ ಈ ಯೋಜನೆಯನ್ನು ಮುಂದುವರಿಸಿಕೊಂಡು ಹೋಗುವುದರಿಂದ ಮಾನ್ಯ ಸದಸ್ಯರು ಯಾವ ಆತಂಕವನ್ನು ಪಡಬೇಕಾದಂಥ ಅಗತ್ಯವಿಲ್ಲ ಮತ್ತು ಆ ನಿಯಮಾವಳಿಗನುಸಾರವಾಗಿ ಯಾರು ಯಾರು ಉದ್ಯೋಗವನ್ನು ಬಯಸುತ್ತಾರೋ ಆಯಾಯ ಬ್ಲಾಕ್‌ನಲ್ಲಿ ಅಥವಾ ಪಂಚಾಯತಿ ವ್ಯಾಪ್ತಿಯಲ್ಲಿ ಅವರಿಗೆ ಉದ್ಯೋಗವನ್ನು ಕೊಟ್ಟೇ ತೀರಬೇಕು ಎನ್ನುವುದು ಈ ಯೋಜನೆಯ ಮುಖ್ಯ ಗುರಿ.

ವಿರಾಜಪೇಟೆ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆ ರಸ್ತೆಗಳ ದುರಸ್ತಿ

923ಎ - ಶ್ರೀ ಹೆಚ್.ಡಿ. ಬಸವರಾಜು (ವಿರಾಜಪೇಟೆ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ವಿರಾಜಪೇಟೆ ತಾಲ್ಲೂಕಿನ ಬಹುಪಾಲು ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಗಳು ಬಹಳ ವರ್ಷಗಳಿಂದ ದುರಸ್ತಿ ಕಾಣದೆ ಈ ರಸ್ತೆಗಳಲ್ಲಿ ಪ್ರಯಾಣಿಸುವುದು ಅಪಾಯಕಾರಿ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ ರಸ್ತೆಗಳನ್ನು ದುರಸ್ತಿಗೊಳಿಸಲು ಸರ್ಕಾರದವರು ಕೈಗೊಂಡಿರುವ ಕ್ರಮವೇನು ಹಾಗೂ ಎಷ್ಟು ಹಣ ಖರ್ಚು ಮಾಡಲಿದೆ ವಿವರ ತಿಳಿಸುವುದು?*

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು):

ಅ) ವೀರಾಜಪೇಟೆ ತಾಲ್ಲೂಕಿನಲ್ಲಿ ಕಳೆದ ಸಾಲಿನಲ್ಲಿ ಸತತವಾಗಿ ಬಿದ್ದ ಭಾರೀ ಮಳೆಯಿಂದಾಗಿ ಹಾಗೂ ಹೆಚ್ಚಿನ ಭಾರದ ವಾಹನ ಸಂಚಾರದಿಂದಾಗಿ ಹಲವಾರು ರಸ್ತೆಗಳು ಕೆಟ್ಟಿದ್ದುದು ಸರ್ಕಾರದ ಗಮನಕ್ಕೆ ಬಂದಿದೆ. ಈಗಾಗಲೇ ಸದರಿ ರಸ್ತೆಗಳಿಗೆ ಡಾಂಬರು ಪ್ಯಾಚಿಂಗ್ ಕಾರ್ಯ ಕೈಗೊಂಡು ವಾಹನ ಸಂಚಾರಕ್ಕೆ ಯೋಗ್ಯವಾಗಿಡಲಾಗಿದೆಯಾದ್ದರಿಂದ ಇವುಗಳಲ್ಲಿ ಪ್ರಯಾಣಿಸುವುದು ಅಪಾಯಕಾರಿಯಲ್ಲ.

ಆ) ಕೆಟ್ಟು ಹೋದ ರಸ್ತೆಯ ಭಾಗಗಳಿಗೆ ಈಗಾಗಲೇ ಡಾಂಬರು ಪ್ಯಾಚಿಂಗ್ ಕಾರ್ಯಕೈಗೊಂಡು ವಾಹನ ಸಂಚಾರಕ್ಕೆ ಯೋಗ್ಯವಾಗಿಡಲಾಗಿದೆ. ಅಲ್ಲದೇ ಅತೀ ಹಾಳಾದ ಭಾಗಗಳಿಗೆ ನವೀಕರಣ ಹಾಗೂ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡು ಪ್ರಗತಿಯಲ್ಲಿದೆ. ವಿವರ ಕೆಳಕಂಡಂತಿದೆ :

(ಲಕ್ಷ ರೂ.ಗಳಲ್ಲಿ)

ಕ್ರಮ ಸಂಖ್ಯೆ	ಲೆಕ್ಕ ಶೀರ್ಷಿಕೆ	ಬಿಡುಗಡೆಯಾದ ಅನುದಾನ
1.	5054 ರಸ್ತೆ ಮತ್ತು ಸೇತುವೆಗಳು - 52 ಇತರ ರಸ್ತೆಗಳ ನಿರ್ಮಾಣ ಯೋಜನೆ	3.00
2.	-"- ಕ್ಷೇತ್ರಾವಾರು ಕಾರ್ಯಕ್ರಮ	10.00
3.	-"- ಉನ್ನತೀಕರಣಗೊಂಡ ರಸ್ತೆಗಳು	3.00
		16.00